ಇ) ಓವರ್‌ಲೋಡ್ ಆದ ಕಾರಣದಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧಿಕಾರಿಗಳು ಪಂಪು ಸೆಟ್ಟುಗಳಿಗೆ ವಿದ್ಯುತ್ ಒದಗಿಸುವುದನ್ನು ತಿರಸ್ಕರಿಸುವುದರಿಂದ ಬಡ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ?

ಈ) ಹಾಗಾದ ಪಕ್ಷದಲ್ಲಿ ಸರ್ಕಾರ/ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಈ ಬಗ್ಗೆ ಯೋಚಿಸಿರುವ ಪರಿಹಾರಗಳೇನು ?

ಉ) ಸರ್ಕಾರವು ಮೇಲೆ ತಿಳಿಸಿದ ಕೆಲಸವನ್ನು ಮಾಡಲು ತ್ವರಿತ ಕ್ರಮವನ್ನು ತೆಗೆದುಕೊಳ್ಳುವುದೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಇಲ್ಲ. ಆದರೆ 110 ಕೆ. ವಿ. ಸಬ್‌ಸ್ಟೇಷನ್‌ನ್ನು ಸ್ಥಾಪಿಸುವ ಪ್ರಸ್ತಾವನೆಯು ಇರುತ್ತದೆ.

ಆ) ಇದನ್ನು 1992 ನೇ ವರ್ಷದಲ್ಲಿ ಮುಗಿಸುವ ಗುರಿ ಇರುತ್ತದೆ.

ಇ) ಕಡಿಮೆ ವೋಲ್ಟೇಜ್ ಪರಿಸ್ಥಿತಿಯಿಂದ ಪಂಪುಸೆಟ್ಟುಗಳಿಗೆ ವಿದ್ಯುತ್ ಮಂಜೂರಾತಿ ಮಾಡುತ್ತಿರುವುದು ತಡವಾಗುತ್ತಿತ್ತು. ಈಗ ಮಜ್ಜೇಹಳ್ಳಿಯಲ್ಲಿ 110 ಕೆ. ವಿ. ಸಬ್‌ಸ್ಟೇಷನ್‌ನ್ನು ಸ್ಥಾಪಿಸಿರುವುದರಿಂದ ಪಂಪುಸೆಟ್ಟುಗಳಿಗೆ ವಿದ್ಯುತ್ ಮಂಜೂರಾತಿ ಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಮಜ್ಜೇಹಳ್ಳಿಯಲ್ಲಿ 110 ಕೆ. ವಿ. ಸಬ್‌ಸ್ಟೇಷನ್‌ನ್ನು ಸ್ಥಾಪಿಸುವುದು ಇದಕ್ಕೆ ಪರಿಹಾರವಾಗುತ್ತದೆ.

ಉ) ಈ ಸಬ್‌ಸ್ಟೇಷನ್‌ಗೆ ಬೇಕಾದ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಮತ್ತು ಇದಕ್ಕೆ ಸಂಬಂಧಪಟ್ಟ ಸಾಮಾನುಗಳನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳುತ್ತಿದೆ.

ವಿಷಯ :– ಅಗ್ರಾಣಿ ನಾಲಾದಲ್ಲಿ ಮರಳನ್ನು ತೆಗೆಯುತ್ತಿರುವುದರಿಂದ ಅಕ್ಕಪಕ್ಕದ ಹಳ್ಳಿಗಳಿಗೆ ಆಗುತ್ತಿರುವ ತೊಂದರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 571 (1021)

ಶ್ರೀ ಬಾಪುಗೌಡ ಪಾಟೀಲ (ಕಿತ್ತೂರು) :– ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿ ಹರಿಯುತ್ತಿರುವ ಅಗ್ರಾಣಿ ನಾಲಾದಲ್ಲಿ ಮರಳನ್ನು ತೆಗೆಯುತ್ತಿರುವುದರಿಂದ ಪಕ್ಕದಲ್ಲಿರುವ 16 ಹಳ್ಳಿಗಳಲ್ಲಿ ಜಲದ ಮೂಲವು ಬತ್ತಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಬಿ) ಮಹಾರಾಷ್ಟ್ರ ಸರ್ಕಾರವು ಅವರ ಪ್ರದೇಶದಲ್ಲಿ ಹರಿಯುತ್ತಿರುವ ಅದೇ ಅಗ್ರಾಣಿ ನಾಲಾದಲ್ಲಿ ಇದೇ ಕಾರಣಕ್ಕಾಗಿ ಮರಳು ತೆಗೆಯುವುದಕ್ಕೆ ಗುತ್ತಿಗೆ ನೀಡಲು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಸಿ) ಸರ್ಕಾರವು ಎಲ್ಲಾ ಕಲ್ಲುಗಣಿ ಗುತ್ತಿಗೆದಾರರ ಪರವಾನಿಗೆಗಳನ್ನು ರದ್ದುಗೊಳಿಸಿ ಅಥಣಿ ತಾಲೂಕಿನ ಜನರನ್ನು ರಕ್ಷಿಸುತ್ತದೆಯೇ ?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) :–

ಎ) ಇಲ್ಲ.

ಬಿ) ಇಲ್ಲ.

ಸಿ) ಸಂಬಂಧಪಟ್ಟ ಜಿಲ್ಲೆಯ ಹಿರಿಯ ಭೂವಿಜ್ಞಾನಿಯವರಿಗೆ ಆಕ್ಟೋಬರ್ 1990 ರಲ್ಲಿ ಎಲ್ಲಾ ಮರಳಿನ ಕಲ್ಲು–ಗಣಿ ಚಟುವಟಿಕೆಗಳನ್ನು ಮುಂದಿನ ಸೂಚನೆ ನೀಡುವವರೆಗೆ ನಿಲ್ಲಿಸುವಂತೆ ಸೂಚನೆ ನೀಡಲಾಗಿದೆ.

ಅಧ್ಯಕ್ಷರು :– ಮಂಡಿಸಲಾಯಿತು. ಸಾದತ್ ಅಲಿ ಖಾನ್‌ರವರೇ ತಮ್ಮ ಪ್ರಶ್ನೆಗೆ ಉತ್ತರಗಳನ್ನು ನಾಳೆಯ ದಿವಸ ತರಿಸಿಕೊಡುತ್ತೇನೆ.

ರಾಜ್ಯದಲ್ಲಿ ಸಾರಿಗೆ ದರಗಳ ಹೆಚ್ಚಳದ ಹಿನ್ನೆಲೆಯಲ್ಲಿ ಪ್ರಸ್ತಾವನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ ನಾನೂ, ಮಾನ್ಯ ಚಂದ್ರೇಗೌಡರೂ ಹಾಗೂ ಇನ್ನೂ ಕೆಲವು ಸದಸ್ಯರು ಸಹಿ ಹಾಕಿ ನಿನ್ನೆಯ ದಿವಸ ಒಂದು ವಿಷಯವನ್ನು ತಮಗೆ ಕಳುಹಿಸಿಕೊಟ್ಟಿದ್ದೆವು. ಈ ಅಧಿವೇಶನವು ಸೋಮವಾರದಿಂದ ಪ್ರಾರಂಭವಾಗುತ್ತದೆಂದು ತಿಳಿದಿದ್ದರೂ ಕೂಡ ನಮ್ಮ ಸರ್ಕಾರದ ಸಾರಿಗೆ

ಇಲಾಖೆಯ ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುವುದರ ಮೂಲಕ ರಾಜ್ಯದ ಜನತೆಯನ್ನು ತಲ್ಲಣಗೊಳಿಸಿದ್ದಾರೆ. 6 ತಿಂಗಳ ಹಿಂದೆ ಕೆ. ಎಸ್. ಆರ್. ಟಿ. ಸಿ. ಗೆ ಸುಮಾರು 80 ರಿಂದ 100 ಕೋಟಿ ರೂ. ವರೆಗೆ ನಷ್ಟ ವಾಗುತ್ತದೆ. ಕೇಂದ್ರ ಸರ್ಕಾರದವರು ಡೀಸಲ್ ಬೆಲೆಯನ್ನು ಹೆಚ್ಚಿಗೆ ಮಾಡಿದ್ದಾರೆ ಎಂಬ ಕಾರಣ ದಿಂದ ಶೇಕಡ 35 ರಷ್ಟು ರಸ್ತೆ ಸಾರಿಗೆ ದರಗಳನ್ನು ಹೆಚ್ಚಿಗೆ ಮಾಡಿದ್ದರು. ಈಗ ಮತ್ತೆ ಕೊಲ್ಲಿ ಸುಂಕ ಎಂದು ಶೇಕಡ 10 ರಷ್ಟು ಹಾಕುತ್ತಿದ್ದೇವೆಂದು ಮಾನ್ಯ ಸಾರಿಗೆ ಸಚಿವರು ಹೇಳಿದ್ದಾರೆ. ಇಲ್ಲಿ ಬಹಳ ಮುಖ್ಯವಾದುದು ಎಂದರೆ ರಾಜ್ಯದಲ್ಲಿ ಕಳೆದ 1 ವರ್ಷದಿಂದ ಪ್ರತಿಯೊಂದು ಪದಾರ್ಥಗಳ ಬೆಲೆಗಳೂ ವಿಪರೀತವಾಗಿ ಜಾಸ್ತಿ ಯಾಗಿವೆ. ಅದು ಕರೆಂಟ್‌ಗೆ ಸಂಬಂಧಪಟ್ಟಂತಿರಬಹುದು. ಇಂಡಸ್ಟ್ರಿಯಲ್ ಫೀಲ್ಡ್‌ಗೆ ಸಂಬಂಧಪಟ್ಟಂತಿರ ಬಹುದು, ಲೇಬರ್ ಫೀಲ್ಡ್‌ಗೆ ಸಂಬಂಧಪಟ್ಟಂತಿರಬಹುದು, ಸಾಮಾನ್ಯ ಜನರ ಬದುಕಿಗೆ ಸಂಬಂಧಪಟ್ಟಂತಿರ ಬಹುದು, ರೈತರಿಗೆ ಸಂಬಂಧಪಟ್ಟಂತಿರಬಹುದು ಒಟ್ಟಿನಲ್ಲಿ ಇವೊತ್ತು ಮಧ್ಯಮ ವರ್ಗದ ಜನರು ಜೀವನ ನಡೆಸುವುದಕ್ಕೆ ಬಹಳ ಕಷ್ಟವಾಗಿದೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಜನರು ಬಹಳ ಬೇಸತ್ತಿದ್ದಾರೆ. ಇಂಥಾದ್ದರಲ್ಲಿ ಸಾರಿಗೆ ದರಗಳನ್ನು ಶೇಕಡ 10 ರಷ್ಟು ಜಾಸ್ತಿ ಮಾಡುತ್ತೇವೆಂದು ಸರ್ಕಾರದವರು ಹೇಳುವು ದಾದರೆ ಜನಸಾಮಾನ್ಯರಿಗೆ ಜೀವನ ಮಾಡಲು ಬಹಳ ಕಷ್ಟವಾಗುತ್ತದೆ. ಸಾರಿಗೆ ಸಂಸ್ಥೆಯ ಬಗ್ಗೆ ಹೇಳುವು ದಾದರೆ, ಈ ಸಂಸ್ಥೆಯಲ್ಲಿ ಕಳೆದ 2 ವರ್ಷದಿಂದ ಎಫಿಷಿಯನ್ಸಿ ಎನ್ನುವುದು ಹಾಳಾಗಿ ಹೋಗಿ ಕೋಟ್ಯಾಂತರ ರೂಪಾಯಿ ಲುಕ್ಸಾನಾಗುತ್ತಿದೆ. ಇದರ ಜೊತೆಗೆ ರೆವಿನ್ಯೂ ಕಲೆಕ್ಷನ್ಸ್ ಕಡಿಮೆ ಆಗುತ್ತಿದೆ. ಈಗ 15 ಅಥವಾ 20 ಪರ್ಸೆಂಟ್ ಮಾಡಿದ್ದೇವೆಂದು ಇಂದಿನ ಸಾರಿಗೆ ಮಂತ್ರಿಗಳು ಹೇಳಲಿಕ್ಕೆ ಹೊರಟಿದ್ದಾರೆ. ಅದು ಎಷ್ಟೇ ಆಗಲಿ, ರೆವಿನ್ಯೂ ರಿಯಲೈಸೇಷನ್ ಹೆಚ್ಚಿಗೆ ಆಗಿಲ್ಲ. ಯಾವ ಡಿವಿಷನ್‌ನಲ್ಲೂ ಕೂಡ ಆಗಿಲ್ಲ. ಇಂಥ ಸಂದರ್ಭದಲ್ಲಿ ಸರ್ಕಾರ ತನ್ನ ವೈಫಲ್ಯತೆಯನ್ನು ಮುಚ್ಚಿಕೊಳ್ಳುವುದಕ್ಕೆ ರಾಜ್ಯದ ಜನತೆಯಮೇಲೆ ಮತ್ತೊಂದುಸಾರಿ ತೆರಿಗೆಯನ್ನು ಹಾಕುವುದಾದರೆ ಅದನ್ನು ನಾವು ವಿರೋಧ ಮಾಡುತ್ತೇವೆ. ಕಳೆದ ಸಾರಿ ನಾವು ನಿಲುವಳಿ ಸೂಚನೆಯನ್ನು ತಂದು ಇದನ್ನು ಚರ್ಚೆ ಮಾಡಬೇಕೆಂದು ಕೇಳಿಕೊಂಡಾಗ ಇದೇ ಅಧಿವೇಶನ ಸಂದರ್ಭದಲ್ಲಿ ಕೆ. ಇ. ಬಿ. ಬೆಲೆಗಳನ್ನು ನಾವು ಜಾಸ್ತಿ ಮಾಡುವುದಿಲ್ಲವೆಂದೂ ಒಂದು ವೇಳೆ ಮಾಡಿದರೂ ಸ್ವಲ್ಪ ಮಟ್ಟಿಗೆ ಮಾತ್ರ ಮಾಡುತ್ತೇವೆ ಎಂದೂ ಭರವಸೆಯನ್ನು ಕೊಟ್ಟಿದ್ದರು. ಆದರೆ ಅಧಿವೇಶನ ಮುಗಿದ ತಕ್ಷಣವೇ ರಾಜ್ಯದ ಜನತೆಯಮೇಲೆ ಒಂದು ದೊಡ್ಡ ಹೊರೆಯನ್ನೇ ಹೊರಿಸಿದರು. ಈಗ ಅದೇ ರೀತಿ ಕೆ.ಎಸ್.ಆರ್.ಟಿ.ಸಿ. ಯ ಆಡಳಿತ ವೈಫಲ್ಯತೆಯನ್ನು ಮುಚ್ಚಿಕೊಳ್ಳುವುದಕ್ಕೆ ರಾಜ್ಯದ ಜನತೆಯಮೇಲೆ ಸಾರಿಗೆ ದರದ ಮುಖಾಂತರ ಹೊರೆಯನ್ನು ಹಾಕುವುದಕ್ಕೆ ಹೊಗುತ್ತಿದ್ದಾರೆ. ಇದರಿಂದ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಇದರ ಜೊತೆಗೆ ಜನತೆಗೂ ಕೂಡ ಜೀವನ ನಡೆಸುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ತಾವು ಈ ವಿಷಯದಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :– ನಿಮ್ಮ ಪೂರ್ವಭಾವಿ ಅನಿಸಿಕೆಗಳನ್ನು ನಾನು ಕೇಳಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಇಲ್ಲಿ ಮುಖ್ಯವಾದ ಪ್ರಶ್ನೆ ಏನೆಂದರೆ ಈ ಮಾತನ್ನು ಮಾನ್ಯ ಸಾರಿಗೆ ಸಚಿವರು ಹೇಳಿದ್ದಾರೋ ಇಲ್ಲವೋ ಎಂಬುದು.

(ಗೊಂದಲ)

ಅಧ್ಯಕ್ಷರು :– ಮಾನ್ಯ ವಿರೋಧ ಪಕ್ಷದ ನಾಯಕರು ಪ್ರೊಪ್ರೈಟಿಯ ಪ್ರಶ್ನೆಯನ್ನು ಹೇಳುತ್ತಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಸರ್ಕಾರ ಏನು ಮಾಡುತ್ತದೆಯೋ ಬಿಡುತ್ತದೆಯೋ ಎಂಬ ಪ್ರಶ್ನೆ ಬೇರೆ. ಆದರೆ ಈ ಶಾಸನಸಭಾ ಅಧಿವೇಶನ ಇಂಥ ತಾರೀಖಿನ ನಡೆಯುತ್ತದೆಂಬ ಆದೇಶ ಮತ್ತು ನಮ್ಮ ಸಲಹಾ ಸಮಿತಿಯ ತೀರ್ಮಾನದ ಮೇಲೆ ಇಲ್ಲಿನ ಕಾರ್ಯಕ್ರಮಗಳನ್ನು ನಿಗದಿ ಮಾಡಿದ ಮೇಲೆ ಅಲ್ಲಿಯ ವರೆಗೂ ಈ ಶಾಸನಸಭೆಯ ಕಾರ್ಯಕಲಾಪಗಳು ನಡೆಯುತ್ತವೆ ಎಂದು ಅರ್ಥ. ಅಥವಾ ಇಂಥ ತಾರೀಖಿನ ಅಧಿವೇಶನ ಸೇರುತ್ತದೆ ಎಂದು ಅರ್ಥ. ಇಂಥ ಸಂದರ್ಭದಲ್ಲಿ ಪಾಲಿಸಿ ಮ್ಯಾಟರ್ಸ್ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವಾಗ ಈ ಶಾಸನ ಸಭೆಯನ್ನು ಇಗ್ನೋರ್ ಮಾಡಿ.....

ಅಧ್ಯಕ್ಷರು :– ಸಚಿವರು ಹೇಳಿದ್ದಾರೋ, ಇಲ್ಲವೋ ಎನ್ನುವುದು ಈಗಿನ ಪ್ರಶ್ನೆ.....

(ಗೊಂದಲ)

ಅಧ್ಯಕ್ಷರು :– ನೀವು ಅವಕಾಶವನ್ನು ಕೊಟ್ಟರೆ ತಾನೇ ಅವರು ಹೇಳುವುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ನಾನು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇನೆಂದರೆ ಶಾಸನಸಭೆ ನಡೆಯುವಾಗ ಈ ಸಭೆಯ ಪಕ್ಕಿಗೆ ಚ್ಯುತಿಯಾಗುವಂಥ

(ಗೊಂದಲ)

ನಾನು ಅದನ್ನೇ ಹೇಳುತ್ತಿದ್ದೇನೆ.

ಅಧ್ಯಕ್ಷರು :– ಅವರು ಹೇಳಿದರೇ ಇಲ್ಲವೇ ಎನ್ನುವುದು ಪ್ರಶ್ನೆ.

ಶ್ರೀ ವಾಟಾಳ್ ನಾಗರಾಜ್ :– ನಾನು ಅದನ್ನೇ ಹೇಳುತ್ತಿದ್ದೇನೆ. ಮಾನ್ಯ ಸಚಿವರು ಹೇಳಿದ್ದಾರೆ.ತಾವು ಕಡತವನ್ನು ತೆಗೆದುನೋಡಿ. ಸರ್‌ಚಾರ್ಜ್ ಸರ್ಕಾರ ಹಾಕುವುದು ಯಾವುದು ? ಇದನ್ನು ಹಾಕಲು ತೀರ್ಮಾನ ತೆಗೆದುಕೊಂಡವರು ಯಾರು ? ಇದು ಸಚಿವ ಸಂಪುಟದ ತೀರ್ಮಾನವೇ ? ಅಥವಾ ಇವರೊಬ್ಬರ ಏಕಾಭಿಪ್ರಾಯವೇ, ಇವರು ಸರ್ವಾಧಿಕಾರಿಯೇ ಏನು ಇದು ? ಈ ರೀತಿ ಬೆಲೆಯನ್ನು ಏರಿಸುತ್ತಾ ಹೋದರೆ ರಾಜ್ಯದ ಪರಿಸ್ಥಿತಿ ಏನಾಗುತ್ತದೆ ? 18 ತಿಂಗಳಲ್ಲಿ ಎರಡುಬಾರಿ ಬೆಲೆಯನ್ನು ಏರಿಸಿದರೆ ಜನರ ಪರಿಸ್ಥಿತಿ ಏನಾಗುತ್ತದೆ. ಈಗ ಸಚಿವರ ಮೇಲೆ ಪಕ್ಕ ಚ್ಯುತಿಯನ್ನು ತರುತ್ತೇನೆ.

ಅಧ್ಯಕ್ಷರು :– ತನ್ನಿ ತನ್ನಿ.

ಶ್ರೀ ವಾಟಾಳ್ ನಾಗರಾಜ್ :– ಏತಕ್ಕೆಂದರೆ ಸಭೆಯು ನಡೆಯುವಾಗ ಮಾನ್ಯ ಸಚಿವರು ಇಲ್ಲವೆಂದು ಹೇಳಿ ಯಾರನ್ನೋ ಕೇಳತಕ್ಕಂಥದ್ದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು :– ಕೇಳೋಣ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಸಾರಿಗೆ ಸಚಿವರನ್ನು ತಾವು ಕರೆಯಿಸಿ.

ಅಧ್ಯಕ್ಷರು :– ಮಾನ್ಯ ಸಾರಿಗೆ ಸಚಿವರು ಕೊಲ್ಲಿಗೆ ಹೋಗಿಲ್ಲ, ಇಲ್ಲಿಯೇ ಇದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಸಾರಿಗೆ ಸಚಿವರು ಇಲ್ಲದಿದ್ದರೆ ಬೇರೆ ಯಾರಾದರೂ ಪ್ರವೇಶ ಮಾಡಲಿ ಸಾರಿಗೆ ಸಚಿವರನ್ನು ಕರೆಯಿಸಿ ಇಲ್ಲದಿದ್ದರೆ ಮಾನ್ಯ ಮುಖ್ಯ ಮಂತ್ರಿಗಳಿದ್ದಾರೆ. ಅವರೇ ಹೇಳಲಿ.

ಶ್ರೀ ಡಿ. ಬಿ. ಚಂದ್ರೇಗೌಡ :– ಮಾನ್ಯ ಅಧ್ಯಕ್ಷರೇ ಮುಖ್ಯವಾದ ಪ್ರಶ್ನೆ ಸಾರಿಗೆ ಸಚಿವರು ಇಂಥ ಹೇಳಿಕೆಯನ್ನು ಶಾಸನಸಭೆಯ ಮುಂದಿಟ್ಟು ಹೇಳಿದ್ದಾರೆಯೇ ಇಲ್ಲವೇ ಎನ್ನುವುದನ್ನು ಹೇಳಲಿ.

ಅಧ್ಯಕ್ಷರು :– ಸರ್ಕಾರದವರು ಏನು ಹೇಳುತ್ತಾರೆಯೋ ಹೇಳಲಿ, ಕೇಳೋಣ.

(ಗೊಂದಲ)

ಆರ್ಡರ್... ಆರ್ಡರ್.....

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಯಾರು ಹೇಳಿಕೆಯನ್ನು ಕೊಟ್ಟಿದ್ದಾರೆಯೋ ಅವರೇ ಇಲ್ಲಿ ಹೇಳಲಿ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಸದಸ್ಯರು ನನ್ನ ಜೊತೆಯಲ್ಲಿ ಸಹಕರಿಸಬೇಕು.

ಶ್ರೀ ಬಸವರಾಜ ರಾಯರೆಡ್ಡಿ :– ಮಾನ್ಯ ಸಚಿವರಾದ ಆಜೀಜ್‌ಸೇಟ್‌ರವರು ಹುಬ್ಬಳ್ಳಿಯಲ್ಲಿ ಕೊಟ್ಟಿರುವ ಹೇಳಿಕೆ (ಓದಲು ಪ್ರಾರಂಭಿಸುವರು)

(ಗೊಂದಲ)

Mr. Speaker — I am trying to help you, I am trying to co-operate with you.

ನಾನು ಇಲ್ಲಿಗೆ ಮುಕ್ತಾಯ ಮಾಡಬೇಕಾಗುತ್ತದೆ.

ಸರ್ಕಾರದವರು ಇದರ ಬಗ್ಗೆ ನಿರ್ಧಾರ ತೆಗೆದುಕೊಂಡಿರುತ್ತಾರೆಯೇ ಇಲ್ಲವೇ ಎನ್ನುವ ಬಗ್ಗೆ ಅವಕಾಶ ಕೊಡುತ್ತೇನೆ ಕೇಳಿ. ಅವರು ಹೇಳುವುದನ್ನು ಕೇಳಿ. ಅವರು ಹೇಳಿಕೆ ಕೊಟ್ಟಿದ್ದಾರೆಯೇ ಇಲ್ಲವೇ ಎನ್ನುವುದನ್ನು ಕೇಳಿ. ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದು ಸೆಕೆಂಡರಿ. ಅದನ್ನು ನಾನು ಡೆಸ್‌ಪ್ಯೂಟ್ ಮಾಡುತ್ತಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ ತಮ್ಮ ಆಜ್ಞೆ ಏನಿದೆ ಅದನ್ನು ಪಾಲಿಸುತ್ತೇವೆ.

ಅಧ್ಯಕ್ಷರು :– ಆಜ್ಞೆಯಲ್ಲ ವಿನಂತಿ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಆಜ್ಞೆ ಮಾಡುವುದು ತಮ್ಮ ಕರ್ತವ್ಯ. ಮಾನ್ಯ ಸಭಾನಾಯಕರು ಇಲ್ಲಿದ್ದಾರೆ. ಮಾನ್ಯ ಜಾರ್ಜ್‌ರವರ ಬಗ್ಗೆ ನಮಗೆ ಗೌರವವಿದೆ. ಆದರೆ ಸಾರಿಗೆ ಇಲಾಖೆ ಈಗ ಅವರ ಕೈಯಲ್ಲಿಲ್ಲ. ಮತ್ತು ಪತ್ರಿಕಾ ಹೇಳಿಕೆಯನ್ನು ಕೊಟ್ಟಿರುವವರು ಅವರಲ್ಲ. ಮಾನ್ಯ ಮಂತ್ರಿಗಳು ಇಲ್ಲದಿರತಕ್ಕಂಥ ಸಂದರ್ಭದಲ್ಲಿ ಯಾರೋ ಮಂತ್ರಿಗಳು ಜವಾಬ್ದಾರಿಯಿಂದ ಉತ್ತರವನ್ನು ಕೊಟ್ಟರೆ ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಜೆ. ಜಾರ್ಜ್ :– ಮಾನ್ಯ ಅಧ್ಯಕ್ಷರೇ ಮಾನ್ಯ ಉಪನಾಯಕರು ಕೇಳಿದರು.

(ಗೊಂದಲ)

ಶ್ರೀ ಎಸ್. ಐಸಾಮಿಯ :– ಗೆಜೆಟ್‌ನಲ್ಲಿ ಬಂದಿದೆಯೇ ? ಪತ್ರಿಕೆಯಲ್ಲಿ ಬಂದಿರಬಹುದು.

ಅಧ್ಯಕ್ಷರು :– ಮಾನ್ಯ ಭದ್ರಾವತಿ ಸದಸ್ಯರು ಗೆಜೆಟ್ ನೋಟಿಫಿಕೇಷನ್ ಆಗಿದೆಯೇ ಎಂದು ಕೇಳಿದರು.

ಶ್ರೀ ಕೆ. ಜೆ. ಜಾರ್ಜ್ :– ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧ ಪಕ್ಷದ ಉಪನಾಯಕರು ಕೆಲವು ಪ್ರಶ್ನೆಗಳನ್ನು ಇದರ ಮಧ್ಯದಲ್ಲಿ ಹೇಳಿದರು. ನಾನೂ ಸಹ ಸಾರಿಗೆ ಸಚಿವನಾಗಿದ್ದೆ.

ಶ್ರೀ ಕೆ. ಜೆ. ಜಾರ್ಜ್ :– ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧ ಪಕ್ಷದ ಉಪನಾಯಕರು ಕೆಲವು ಪ್ರಶ್ನೆಗಳನ್ನು ಇದರ ಮಧ್ಯದಲ್ಲಿ ಹೇಳಿದರು. ನಾನು ಸಾರಿಗೆ ಸಚಿವನಾಗಿದ್ದ ಕಾಲಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಕ್ಲಾರಿಫಿಕೇಷನ್‌ಗಳನ್ನು ಕೊಡುತ್ತೇನೆ. 35 ಪರ್ಸೆಂಟ್ ಜಾಸ್ತಿ ಮಾಡಿದ್ದೇವೆ ಅಂದರು.....

ಒಬ್ಬ ಮಾನ್ಯ ಸದಸ್ಯರು :– ಪ್ರಶ್ನೆ ಆದಲ್ಲ.....

ಅಧ್ಯಕ್ಷರು :– ಆವರ ಪ್ರಶ್ನೆ ಏನೆಂದರೆ, ಅಸೆಂಬ್ಲಿ ಮುಂದುವರಿದಿರುವಾಗ ಸದನದ ಹೊರಗಡೆ ಪಾಲಿಸಿ ಸ್ಟೇಟ್‌ಮೆಂಟ್‌ನ್ನು ಮಾಡತಕ್ಕ ಅವಶ್ಯಕತೆ ಏನಿತ್ತು ಎನ್ನುವುದು.

ಶ್ರೀ ಎಸ್. ಬಂಗಾರಪ್ಪ :– ಅದು ಎಲ್ಲರೂ ಕೂಡ ಒಪ್ಪಿರತಕ್ಕ ಒಂದು ನೀತಿ. ಶಾಸನಸಭಾ ಅಧಿವೇಶನ ನಡೆಯುತ್ತಿರಬೇಕಾದರೆ ಹೊರಗಡೆ ಹೇಳಿಕೆ ಕೊಟ್ಟರೆ ಸದನದ ಹಕ್ಕಿಗೆ ಚ್ಯುತಿ ಉಂಟಾಗುತ್ತದೆ ಎಂಬುದು ಎಲ್ಲರೂ ಒಪ್ಪಿ ಪಾಲನೆ ಮಾಡಿಕೊಂಡು ಬಂದಿರತಕ್ಕದ್ದಾಗಿದೆ. ಇದಕ್ಕೆ ಸರ್ಕಾರ ಕೂಡ ಬದ್ಧವಾಗಿದೆ. ಅಂಥ ಸಂದರ್ಭಗಳು ಬಂದಾಗ ಅದ್ಯತೆಗನುಗುಣವಾಗಿ ಸದನದಲ್ಲಿ ಪ್ರಕಟ ಮಾಡಬೇಕು. ಇದೊಂದು ನೀತಿಯ ಪ್ರಶ್ನೆ. ಇದಕ್ಕೆ ವಿರುದ್ಧವಾಗಿ ಹೋದರೆ ಸದನದ ಮೂಲ ಹಕ್ಕಿಗೆ ಚ್ಯುತಿ ಉಂಟಾಗುತ್ತದೆಂದು ಮತ್ತೊಂದು ಸಾರಿ ಹೇಳತಕ್ಕ ಸಂದರ್ಭ ಬಂದರೂ ಹೇಳಬೇಕಾಗುತ್ತದೆ. ಸದನ ಪ್ರಾರಂಭವಾಗಿರತಕ್ಕದ್ದು 17ನೇ ತಾರೀಖು ನಿನ್ನೆ, ಮಾನ್ಯ ಸಚಿವರು ಹೇಳಿಕೆ ಕೊಟ್ಟಿರತಕ್ಕದ್ದು.....

ಶ್ರೀ ಡಿ. ಬಿ. ಚಂದ್ರೇಗೌಡ :– ನವೆಂಬರ್ 17 ನೇ ತಾರೀಖು ಸದನ ಪ್ರಾರಂಭವಾಗಿರುವುದು.

ಶ್ರೀ ಎಸ್. ಬಂಗಾರಪ್ಪ :– ನೀವು ಆ ಅರ್ಥದಲ್ಲಿ ಅಂದರೆ ಕಂಟಿನ್ಯೂಡ್ ಸೆಕ್ಷನ್ ಎಂಬ ಅರ್ಥದಲ್ಲಿ ಹೇಳಿದ್ದೀರಿ. 17 ನೇ ತಾರೀಖು ಅಂದರೆ ನಿನ್ನೆ ಪುನಃ ಮುಂದುವರಿದ ಅಧಿವೇಶನದಲ್ಲಿ ಸೇರಿದ್ದೇವೆ. ಅವರು ಎಂದು ಹೇಳಿಕೆ ಕೊಟ್ಟಿದ್ದಾರೆಂದರೆ 16 ನೇ ತಾರೀಖು ಹುಬ್ಬಳ್ಳಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಅಧಿವೇಶನ ಮುಂದುವರಿದಿದೆಯೇ ಎಂಬ ಅಭಿಪ್ರಾಯ.....

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ತಾವೇ ಹೇಳಿದಿರಿ, ಅಧಿವೇಶನವನ್ನು ಮುಂದುವರಿಸುತ್ತೇವೆ ಎಂದು.

ಶ್ರೀ ಎಸ್. ಬಂಗಾರಪ್ಪ :– ನಾನು ಅದನ್ನೇ ಹೇಳಿದ್ದುದು ಹೇಳಿಕೆ ಕೊಡಬೇಕಾದರೆ ವಾಟಾಳ್ ನಾಗರಾಜ್ ಅಂಥವರ ಹತ್ತಿರ ಬಹಳ ಕಷ್ಟ. ಮುಂದುವರಿದ ಅಧಿವೇಶನ ಅಂದರೆ ಕೆಲವೊಮ್ಮೆ ಬಹಳ ದಿನಗಳು ಮಧ್ಯೆ ಹೊರಟು ಹೋದರೆ ಅಂಥ ಸಂದರ್ಭದಲ್ಲಿ ಒಂದು ಹೇಳಿಕೆ ಪ್ರಕಟವಾದರೆ ಅದು ಸರಿ ಎಂಬ ಅಭಿಪ್ರಾಯವನ್ನು ನಾನು ಒಪ್ಪಿದರೂ ಅದನ್ನು ಯಾವ ಕಂಟಿನ್ಯುವನ್ಸ್‌ನಲ್ಲಿ ಹೇಳಿದರು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಇವರಾಗಿಯೇ ಹೋಗಿ ಕೊಲ್ಲಿ ಸುಂಕ 10 ಪರ್ಸೆಂಟ್ ಹಾಕಿಸ್ತೇವೆಂಬ ಮಾತನ್ನು ನೇರವಾಗಿ ಹೇಳಿದರು ಎಂಬುದು ಪತ್ರಿಕೆಯಲ್ಲಿ ಯಾವ ರೀತಿ ಬರುತ್ತದೆಂಬುದು, ಯಾವ ಕಂಟಿನ್ಯುವನ್ಸ್‌ನಲ್ಲಿ ಎಂಬ ವಿಚಾರವನ್ನು ನೋಡಿದರೆ, ಅದನ್ನು ಹೇಳಬಹುದೇ ಹೊರತು, ಇಲ್ಲದಿದ್ದರೆ ಈ ವಿಚಾರವನ್ನು ಬೇರೆ ರೀತಿಯಲ್ಲಿ ಹೇಳುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ. ಈಗ ಮಾನ್ಯ ಸಚಿವರು ಇಲ್ಲಿ ಇಲ್ಲ. ಇವರೇ ಕಾನ್‌ಫರೆನ್ಸ್ ಕರೆದರೋ ಅಥವಾ ಅವರೇ ಮೀಟಿಂಗ್ ಮಾಡಿದಾಗ ಹೋದರೋ ಎಂಬ ಎರಡು ರೀತಿಯ ಅಭಿಪ್ರಾಯ ಬರುತ್ತದೆ. ಕೆಲವು ವಿವರಗಳನ್ನು ಪಡೆದು ನಾನು ನಂತರ ಸಭೆಗೆ ಹೇಳುತ್ತೇನೆ. ವಿವರಗಳು ಇಲ್ಲದೆ ನಾನು ಈಗ ಏನೂ ಹೇಳುವುದಕ್ಕೆ ಆಗುವುದಿಲ್ಲ. ಅವರು ಬೇಕಾದರೆ ಹೇಳಬಹುದು, ಸಚಿವರು ವಿವರ ಕೊಡಬಹುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಸುಂಕ ಹೆಚ್ಚು ಮಾಡುವುದಿಲ್ಲವೆಂದು ತಾವೇ ಹೇಳಿ.

ಶ್ರೀ ಎಸ್. ಬಂಗಾರಪ್ಪ :– ಆ ವಿಚಾರದ ಬಗ್ಗೆ ಅಂತಿಮವಾಗಿ ಸರ್ಕಾರ ಇನ್ನೂ ತೀರ್ಮಾನ ಮಾಡಿಲ್ಲ. ಅವರು ಯಾವ ಕಂಟೆಸ್ಟ್‌ನಲ್ಲಿ ಹೇಳಿದರು ಎಂದು ವಿಚಾರ ಮಾಡಬೇಕಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಶೇಕಡ 10 ರಷ್ಟು ಸುಂಕವನ್ನು ಏರಿಸುತ್ತಿದ್ದಿರೋ ಇಲ್ಲವೋ? ಇಲ್ಲದಿದ್ದರೆ ಇಲ್ಲವೆಂದು ಹೇಳಿ.

ಶ್ರೀ ಆರ್. ವಿ. ದೇಶಪಾಂಡೆ :– ಹುಬ್ಬಳ್ಳಿಯಲ್ಲಿ ಅವರು ಪ್ರೆಸ್ ಕಾನ್‌ಫರೆನ್ಸ್ ಮಾಡಿ ತಮ್ಮ ಇಲಾಖೆ ಬಗ್ಗೆ ಬೇರೆ ಬೇರೆ ವಿಚಾರಗಳನ್ನು ಹೇಳಿ ಯಾವ ಪ್ರಕಾರ ವಿತ್‌ಡ್ರಾ ಮಾಡಿದ್ದೀರೆಂದು ಎಲ್ಲಾ ಹೇಳಿದ್ದಾರೆ. ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ 10 ಪರ್ಸೆಂಟ್ ಸರ್‌ಚಾರ್ಜ್ ಎಂದು ಹೇಳಿದ್ದಾರೆ. ಅವರ ಬಗ್ಗೆ ತಮ್ಮ ಜೊತೆ ಸಮಾಲೋಚನೆ ಆಗಿದೆಯೇ, ಕ್ಯಾಬಿನೆಟ್‌ನಲ್ಲಿ ಸಮಾಲೋಚನೆ ಆಗಿದೆಯೇ. ಆ ಬಗ್ಗೆ ಸ್ಪಷ್ಟೀಕರಣ ಕೊಡಿ ಎಂದು ಕೇಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ :– ಪತ್ರಿಕೆ ಪೂರ್ತಿ ಓದಿದರೆ ದೇಶಪಾಂಡೆಯವರಿಗೆ ಗೊತ್ತಾಗುತ್ತದೆ. ಸವದತ್ತಿ ಜಾತ್ರೆಟೈಮಿನಲ್ಲಿ ಎಷ್ಟು ಬಸ್ ಓಡಿಸಬೇಕು ಎಂಬುದನ್ನೂ ಕೂಡ ಹೇಳಿದ್ದಾರೆ ಅಲ್ಲಿ. ನಾನು ಅದಕ್ಕೇ ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್ :– ನಾನು ಹೇಳಿದ್ದೇನೆ ಎಂಬ ಮಾತನ್ನು ಈ ಸಭೆಯಲ್ಲಿ ಅವರು ಒಪ್ಪಿ ಕೊಂಡರು.

ಶ್ರೀ ಎಸ್. ಬಂಗಾರಪ್ಪ :– ತಾವು ಆಸನಾರೂಢರಾಗಬೇಕು ದಯಮಾಡಿ. ಪೂರ್ತಿ ಆದಮೇಲೆ ಬೇಕಾದರೆ ಪ್ರಶ್ನೆ ಕೇಳಿಬಹುದು. ಕೊಲ್ಲಿ ಸರ್ಚಾರ್ಜ್ ವಿಚಾರದಲ್ಲಿ, ಇಡೀ ದೇಶದ ಪ್ರಶ್ನೆ ಇದೆ. ಅದು ಬರೀ ಕರ್ನಾಟಕಕ್ಕೆ ಸೀಮಿತಗೊಂಡ ವಿಚಾರವಲ್ಲ. ನಾವು ಕೆ. ಎಸ್. ಆರ್. ಟಿ. ಸಿ. ಗೆ ಸೀಮಿತಗೊಂಡು ನಮ್ಮ ರಾಜ್ಯಕ್ಕೆ ಸಂಬಂಧ ಪಟ್ಟ ಹಾಗೆ ಮಾತನಾಡುತ್ತಿದ್ದೇವೆ. ದೇಶದಲ್ಲಿ ಯಾವ ಪರಿಸ್ಥಿತಿ ಇದೆ ಎನ್ನುವುದು ತಮಗೆಲ್ಲಾ ಗೊತ್ತಿದೆ. ನಾನು ಜಸ್ಟಿಫೈ ಮಾಡುತ್ತಿಲ್ಲ.

That is not my point. But, what exactly is the background with which we are considering this aspect, whether you are in power, whether we are in power or somebody else is in power there is some burden on us.

ಇಡೀ ದೇಶದ ಮೇಲೆ ಹೊರೆ ಬಂದಿದೆ ಎಂಬುದು ತಮಗೂ ಮನದಟ್ಟಾಗಿರತಕ್ಕ ವಿಚಾರ. ಇಷ್ಟಾದರೂ ಕೂಡ ನಾವು ತತ್‌ಕ್ಷಣ ಪೆಟ್ರೋಲ್ ಬೆಲೆಯನ್ನು ಏರಿಸಿ ಜಾರಿಗೆ ಕೊಟ್ಟಿಲ್ಲ. ಸಪಜವಾಗಿ ಮಾನ್ಯ ಜಾಲಪ್ಪನವರು ಏನು ಹೇಳಿದ್ದಾರೆ ಈ ಯೋಜನೆ ಬರುವುದು ಸಹಜ. ಯಾರೇ ಸರ್ಕಾರ ನಡೆಸಿದರೂ ಬೆಲೆಗಳು ಜಾಸ್ತಿ ಆದ ತಕ್ಷಣ ಪ್ರೈಸ್‌ರೇಟಾ ನಾವು ಕೂಡ ಜಾಸ್ತಿ ಮಾಡತಕ್ಕದ್ದು ಸಹಜ. ಆದ್ದರಿಂದ ಈ ವಿಚಾರ ಸಹಜವಾಗಿ ಬಂದೇ ಬರುತ್ತದೆ. ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಉಪನಾಯಕರು ಮತ್ತು ಸದಸ್ಯರ ಗಮನಕ್ಕೆ ತರುವುದು ಏನೆಂದರೆ ನಮಗೆ ಈ ಒತ್ತಡ ಬಂದಿದ್ದರೂ ಕೂಡ ನಾವು ಯಾವುದೇ ಅಂತಿಮ ತೀರ್ಮಾನ ಇವರ ಬಗ್ಗೆ ಮಾಡಿಲ್ಲ ಹಾಗಾದರೆ ಯಾವಾಗ ಮಾಡುತ್ತೀರಿ, ಏನು ಮಾಡುತ್ತೀರಿ, ಈ ಅಧಿವೇಶನದಲ್ಲಿ ಹೇಳುತ್ತೀರಾ ಎಂಬ ಪ್ರಶ್ನೆ ಬಂದೇ ಬರುತ್ತದೆ. ಏಕೆಂದರೆ ಇದೇ ರೀತಿಯ ಪ್ರಶ್ನೆಯನ್ನು ಅಲ್ಲಿ ಕುಳಿತು ನಾವು ಕೇಳಿದ್ದೇವೆ. ನಾನು ಇಷ್ಟು ಹೇಳಬಲ್ಲೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಏನಿದೆ ಅದು ಸಾಕಷ್ಟು ಲಾಸ್‌ನಲ್ಲಿದೆ. ಈ ಮಾತನ್ನು ಮಾನ್ಯ ಸಿಂಧ್ಯ ಅವರೂ ಹೇಳಿದ್ದಾರೆ. ಸಮಗೂ ಕೂಡ ಗೊತ್ತಿರತಕ್ಕ ವಿಚಾರ. ಕೊಲ್ಲಿ ಸರ್‌ಚಾರ್ಜ್‌ಹಾಕತಕ್ಕ ಪರಿಸ್ಥಿತಿ ಇದ್ದರೂ ಕೂಡ, ನಾವು ಸುಮ್ಮನಿದ್ದರೂ ಕೂಡ ಮತ್ತೆ ಇದಕ್ಕೆ ನಷ್ಟವಾಗುವ ಪರಿಸ್ಥಿತಿ ಇದೆ. ಆದರೆ ಮೊನ್ನೆ ಮೊನ್ನೆ ತಾನೇ ಏಪ್ರಿಲ್ ಮೇ ತಿಂಗಳಲ್ಲಿ ನಾವು ಜಾಸ್ತಿ ಮಾಡಿದ್ದೇವೆ. ಪುನಃ ಮತ್ತೆ ಜಾಸ್ತಿ ಮಾಡಿದರೆ.....

ಶ್ರೀ ಆರ್. ವಿ. ದೇಶಪಾಂಡೆ :– ಕಡಿಮೆ ಮಾಡಬೇಕೆಂದು ಚರ್ಚೆಯಾಗಿದೆ. ತಾವೂ ಶಿವಮೊಗ್ಗದಲ್ಲಿ ಹೇಳಿದ್ದೀರಿ. ಕಡಿಮೆ ಮಾಡಬೇಕು ಎಂಬ ಅಭಿಪ್ರಾಯ ತಮ್ಮದಿತ್ತು.

ಶ್ರೀ ಎಸ್. ಬಂಗಾರಪ್ಪ— ಜಾಸ್ತಿ ಮಾಡಿ. ಕಡಿಮೆ ಮಾಡಿ ದೇಶಪಾಂಡೆ ಅವರೇ ಇದೆಲ್ಲವೂ ಆಗಿದೆ. ಏಕೆಂದರೆ ನಮ್ಮ ಹತ್ತಿರ ಎಣ್ಣೆ ಇಲ್ಲ. ನಮಗೆ ಬೇಕಾಗಿರತಕ್ಕ ಎಣ್ಣೆ ಸಂಪೂರ್ಣವಾಗಿ ಉತ್ಪಾದನೆ ಮಾಡುತ್ತಿಲ್ಲ. ಅದು ಪೆಟ್ರೋಲಿಯಂ ಪ್ರಾಡಕ್ಟ್.

ಶ್ರೀ ಆರ್. ವಿ. ದೇಶಪಾಂಡೆ :– ಯಾವ ಎಣ್ಣೆ ?

ಶ್ರೀ ಎಸ್. ಬಂಗಾರಪ್ಪ :– ಅದು ಕಾರವಾರ ಜಿಲ್ಲೆಯ ಎಣ್ಣೆ ಅಲ್ಲ.

ಶ್ರೀ ಬಸವರಾಜ ರಾಯರೆಡ್ಡಿ :– ಕಾರವಾರ ಜಿಲ್ಲೆಯ ಎಣ್ಣೆ ಎಂದರೆ ಬೇರೆ ಅರ್ಥವಾಗುತ್ತದೆ.

ಅಧ್ಯಕ್ಷರು :– ದ್ವಂದ್ವಾರ್ಥಗಳನ್ನು ಕಲ್ಪಿಸತಕ ಪದಗಳನ್ನು ಬಿಟ್ಟುಬಿಡುವುದೇ ಒಳ್ಳೆಯದು ಎಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ :– ನಾನು ಹೇಳತಕ್ಕ ಎಣ್ಣಿ ಬಸ್ಸು ಲಾರಿ ಓಡಿಸತಕ್ಕ ಎಣ್ಣಿ. ಪೆಟ್ರೋಲಿಯಂ ಪ್ರಾಡಕ್ಟ್‌ಗಳು. ಎಣ್ಣಿ ಎಂದಾಕ್ಷಣ ಕಾರವಾರ ಜಿಲ್ಲೆ ಎಣ್ಣಿ ಎಂಬ ಅರ್ಥದಲ್ಲಿ ನಾನು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಎಣ್ಣಿ ಎಂದಾಕ್ಷಣ ಬಹಳ ಜನರಿಗೆ ಕಿವಿ ಮೇಲಕ್ಕೆ ಹೋಯಿತು. ಎಣ್ಣಿ ಎಂದಾಕ್ಷಣ ಬಹಳ ಜನರಿಗೆ ಕಿವಿ ನೆಟ್ಟಗಾಯಿತು.

Sri S. Bangarappa :– I do not want to water down the seriousness of the matter. I could see the point in it.

ಮಾನ್ಯ ಸಭಾಧ್ಯಕ್ಷರೆ, ಈ ಸಂದರ್ಭದಲ್ಲಿ ಇಷ್ಟು ನಷ್ಟವಾಗಿರುವ ಕೆ. ಎಸ್. ಆರ್. ಟಿ. ಸಿ. ಗೆ ಯಾವ ರೀತಿಯ ಪರಿಹಾರ ಸೂಚಿಸಬೇಕು ? ಬೆಲೆ ಜಾಸ್ತಿಮಾಡುವ ಒತ್ತಡ ರಾಷ್ಟ್ರದ ಮೇಲಿದೆ ರಾಜ್ಯವೂ ಸೇರಿ ಕೊಂಡಂತೆ. ಇಷ್ಟಿದ್ದರೂ ಮೊನ್ನೆ ಮೊನ್ನೆ ಏರಿಸಿರುವ ಬಸ್ ಛಾರ್ಜ್ ಹಿನ್ನೆಲೆಯಲ್ಲಿ ತತ್‌ಕ್ಷಣ ಜಾಸ್ತಿ ಮಾಡಿದರೆ travelling public ಸಮಸ್ಯೆ ಏನಾಗಬಹುದು ಎಂದು ಗಮನಿಸಿ ತತ್‌ಕ್ಷಣ ಮಾಡುವುದಕ್ಕೆ ಹೋಗಿಲ್ಲ. ಆದರೆ No doubt as a Minister in charge he has to plan the whole budget. There is nothing wrong in telling it. ಜಾಸ್ತಿ ಮಾಡಬೇಕಾಗುತ್ತದೆ ಎಂಬ ಮಾತು... ಮಾನ್ಯ ಸಿಂಧ್ಯ ಅವರೂ ಸಹ ಸಾರಿಗೆ ಮಿನಿಸ್ಟರ್ ಆಗಿದ್ದರು. ಮಾನ್ಯ ಜಾರ್ಜ್ ಅವರು ಅಥವಾ ಯಾರೇ ಇರಬಹುದು ಸಹಜವಾಗಿಯೇ ಈ ವಿಚಾರ ಎಲ್ಲರ ಗಮನಕ್ಕೆ ಬರತಕ್ಕದ್ದಾಗಿದೆ. ಆ ಹಿನ್ನೆಲೆಯಲ್ಲಿ ಇವರು ಹೇಳಿರಬಹುದೇ ವಿನಃ ಅಂತಿಮ ತೀರ್ಮಾನವನ್ನು ನಾವು ಮಾಡಿಲ್ಲ.

1–10 ಪಿ. ಎಂ.

If the Hon'ble Minister concerned says something there is nothing wrong in it but when we take final decision we will have to take all these matters in to consideration. So far we have not taken any decision.

ನಾನು ಇಷ್ಟು ಮಾತ್ರ ಮಾನ್ಯ ಅಧ್ಯಕ್ಷರ ಮುಖಾಂತರ ಹೇಳುತ್ತೇನೆ. ನಾನು ಇಲ್ಲಿ ವಿರೋಧ ಪಕ್ಷದ ಉಪನಾಯಕರಿಗೆ ಗ್ಯಾರಂಟಿ ಕೊಡಬಲ್ಲೆ. ಆದು ಈ ಅಧಿವೇಶನದಲ್ಲೇ ಇರಬಹುದು the whole question corner round on one point that is bus fares.....

ಪುನಃ ನಾನು ಜಾಸ್ತಿ ಮಾಡಿಬಿಟ್ಟರೆ Are we not going to tax more on travelling public..... ಎನ್ನತಕ್ಕ ಪ್ರಶ್ನೆಯನ್ನು ನಾವು ಇಟ್ಟುಕೊಂಡಿದ್ದೇವೆ. ಅದನ್ನು ನೋಡಿ ನಾವು ಮಾಡುತ್ತೇವೆ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾಡುತ್ತೀರೋ ಇಲ್ಲವೋ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್ :– ಸುತ್ತಿ ಬಳಸಿ ಬರೋದು ಏಕೆ ? ಏರಿಸುತ್ತೇವೆ ಅಥವಾ ಇಲ್ಲ ಎಂದು ಹೇಳಿ. ಆಗುತ್ತದೆಯೋ ಇಲ್ಲವೋ ಎಂದು ನೇರವಾಗಿ ಹೇಳಿ.

ಶ್ರೀ ಎಸ್. ಬಂಗಾರಪ್ಪ :– ವಾಟಾಳ್ ನಾಗರಾಜ್ ಅವರಿಗೆ ನೇರವಾಗಿ ಪ್ರಶ್ನೆ ಕೇಳುವುದು ಸುಲಭ. ಆದರೆ ಬಡ್ಜೆಟ್‌ನ್ನು ನಾವು ನೋಡಬೇಕಾಗುತ್ತದೆ. ಆದರೂ ಕೂಡಾ ಸರ್ಕಾರ ಬಸ್ ದರಗಳನ್ನು ತತ್‌ಕ್ಷಣ ಏರಿಸತಕ್ಕ ವಿಚಾರವನ್ನು ಇಟ್ಟಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ನಾನು ನಿನ್ನೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಅದರ ಬಗ್ಗೆ ಮಾತನಾಡಲು ಅಪ್ಪಣೆ ಕೊಡಬೇಕು. ಮಾನ್ಯ ಸಭಾ ನಾಯಕರು ಒಂದು ಮಾತನ್ನು ಹೇಳಿದ್ದಾರೆ. ಶಾಸನಸಭೆ ನಡೆಯತಕ್ಕ ಸಂದರ್ಭದಲ್ಲಿ ಒಂದು ಪಾಲಿಸಿ ಮ್ಯಾಟರ್ ಬಗ್ಗೆ ಯಾವ ಸನ್ನಿವೇಶದಲ್ಲಿ ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆನ್ನುವ ವಿವರವನ್ನು ಅವರಿಂದ ತಿಳಿದು ಈ ಸದನಕ್ಕೆ ತಿಳಿಸುತ್ತೇನೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳೋಣ. ಆದರೆ ನಿಲುವಳಿ ಸೂಚನೆಯನ್ನು ಕಳುಹಿಸುವುದಕ್ಕೆ ಮತ್ತೊಂದು ಪ್ರಮುಖವಾದ ಕಾರಣವೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಗಮನಿಸಬೇಕಾಗುತ್ತದೆ. ಖಾಸಗೀಯಾಗಿ ನಾನು ಕೇಳಿಕೊಳ್ಳುವುದಕ್ಕೆ ಕಾರಣ I am concerned with the people, the KSRTC. functioning-It is detriorating everyday.

ದಿವಸಕ್ಕೆ 30–40 ಲಕ್ಷ ರೂಪಾಯಿಗಳ ನಷ್ಟವಾಗುತ್ತಿದೆ. ಈ ಬಗ್ಗೆ ಸರಿಪಡಿಸಲು ಸರ್ಕಾರಕ್ಕೆ ನಾವೂ ಕೂಡಾ ಸಲಹೆಗಳನ್ನು ಕೊಡುವುದು ಇದೆ. ನಮ್ಮನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಂಡು ಮಾಡುತ್ತೇವೆಂದು ಲಾಸ್ಟ್ ಟೈಮ್ ಹೇಳಿದ್ದರು. ಕೆ.ಇ.ಬಿ. ದರ ಏರಿಸುವಾಗ ನಮ್ಮನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಂಡು ಮಾಡಿಲ್ಲ. ಏಕಾಏಕಿ ಒಂದು ಕಡೆ ಕುಳಿತು ಜಾಸ್ತಿ ಮಾಡಿದ್ದೇವೆಂದು ಹೇಳಿದರು. ಈಗ ಅವರು ತತಕ್ಷಣ ಎಂದು ಹೇಳುತ್ತಿದ್ದಾರೆ

ತಕ್ಷಣ ಮತ್ತು ತತ್‌ಕ್ಷಣಕ್ಕೂ ಮಧ್ಯ ಇರತಕ್ಕ ಸಮಯವಾದರೂ ಏನು ? ಸೆಷನ್ ಆದಮೇಲೆ 20 ಪರ್ಸೆಂಟ್ ಪೆಚ್ಚು ಮಾಡಿ ಅಲ್ಲಿರತಕ್ಕ ಕೆಲವರಿಗೆ ಸಹಾಯ ಮಾಡಬಹುದು. ಈ ಸಂಸ್ಥೆಯ ಬಗ್ಗೆ ಅನೇಕ ವಿಚಾರಗಳನ್ನು ತಿಳಿಸಬೇಕಾಗಿರುವುದರಿಂದ ಯಾವುದಾದರೂ ಸ್ವರೂಪದಲ್ಲಿ ಕೆ. ಎಸ್. ಆರ್. ಟಿ. ಸಿ. ಫಂಕ್ಷನಿಂಗ್ ಬಗ್ಗೆ ಆಗು-ಹೋಗುಗಳ ಬಗ್ಗೆ ಇಲ್ಲಿ ಚರ್ಚೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :– ಈ ವಿಷಯವನ್ನು ಸದನದ ಕಾರ್ಯಕಲಾಪ ಸಮಿತಿಯ ಮುಂದೆ ಮಂಡಿಸುತ್ತೇನೆ ಈ ವಿಚಾರದಲ್ಲಿ ನಿಮ್ಮನ್ನೆಲ್ಲಾ ಕರೆಯುತ್ತೇನೆ.

ಶ್ರೀ ಸಿ. ಬೈರೇಗೌಡ :– ನಿನ್ನೆಯ ದಿವಸ ನಾನು ಒಂದು ಹಕ್ಕುಚ್ಯುತಿ ಸೂಚನೆಯನ್ನು ಕಳುಹಿಸಿದ್ದೇನೆ. ಅದರ ಬಗ್ಗೆ ಈಗ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :– ನಿನ್ನೆ ತಮ್ಮ ಸೂಚನೆ ಬಂದಿದೆ. ನಾನು ಅದರ ಬಗ್ಗೆ ಇನ್ನೂ ಗಮನಹರಿಸುವುದಕ್ಕೆ ಆಗಲಿಲ್ಲ. ನಾಳೆ ಅದನ್ನು ಪ್ರಸ್ತಾಪ ಮಾಡಿ.

ಶ್ರೀ ವಾಟಾಳ್ ನಾಗರಾಜ್ :– ಧರಣಿ ಮಾಡುತ್ತಿರತಕ್ಕ ನಮ್ಮ ಸ್ನೇಹಿತರ ಬಗ್ಗೆ ಒಂದು ನಿರ್ಧಾರ ಮಾಡೋಣ. ದಯಮಾಡಿ ಅವರನ್ನು ತಮ್ಮ ಕಾರ್ಯಾಲಯಕ್ಕೆ ಕರೆದು ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಹಾಗೂ ಅವರ ಒತ್ತಡ ಒಂದೆ ಇದೆ. ಒಂದು ನಿಯೋಗ ಕೇಂದ್ರಕ್ಕೆ ಹೋಗಿ ಅಲ್ಲಿ ಈ ಬಗ್ಗೆ ಒತ್ತಡವನ್ನು ತರಬೇಕೆಂದೂ, ರೈತರ ಸಮಸ್ಯೆಯನ್ನು ಬಗೆಹರಿಸಬೇಕೆಂದೂ ಅವರು ಹೇಳುತ್ತಿರುವ ಬಗ್ಗೆ ನಾವು ಒಂದು ತೀರ್ಮಾನಕ್ಕೆ ಬರೋಣ. ಇದೇನೂ ಅಂತಹ ದೊಡ್ಡ ಸಮಸ್ಯೆ ಅಲ್ಲ. ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ನಿಯೋಗ ದೆಹಲಿಗೆ ಹೋಗಲಿ. ತಾವು ಅವರ ಜೊತೆಯಲ್ಲಿ ಮಾತುಕತೆಯಾಡಿದರೆ ಸಮಸ್ಯೆ ಬಗೆಹರಿಯುತ್ತದೆ. ನೀವು ಅವರನ್ನು ಗಮನಿಸಬೇಕೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು :– ನೀವು ಹೇಳಿದ್ದನ್ನು ನಾನು ಗಮನಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ತಾವು ಇಲ್ಲಿ ಕುಳಿತಿದ್ದೀರಿ. ತಾವು ಅವರನ್ನು ಕರೆದು...

ಅಧ್ಯಕ್ಷರು :– ನಾನು ಒಳಗೆ ಹೋದಮೇಲೆ ತಾನೇ ಅವರನ್ನು ಕರೆಯಬೇಕು.

ಶ್ರೀ ವಾಟಾಳ್ ನಾಗರಾಜ್ :– ಹಾಗಲ್ಲ ಅಧ್ಯಕ್ಷರೇ...

ಅಧ್ಯಕ್ಷರು :– ನಾನು ಒಳಗೆ ಹೋಗುವುದಕ್ಕೆ ಮೊದಲು ಅವಕಾಶ ಕೊಡಿ. ಅನಂತರ ಕರೆಯುತ್ತೇನೆ

ಶ್ರೀ ಬಿ. ಎಸ್. ಬನ್ನಿಕೋಡ್ :– ತಾವು ಒಳಗಡೆ ಹೋಗುವುದಕ್ಕೆ ಮೊದಲು ಕೆಲವೊಂದು ಸಲಹೆಯನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಸರ್ವ ಪಕ್ಷಗಳ ನಿಯೋಗ ಹೋಗುವುದು ದೊಡ್ಡ ಸಮಸ್ಯೆ ಏನೂ ಅಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿದ್ದಾರೆ. ಅವರ ನಾಯಕತ್ವದಲ್ಲೇ ನಿಯೋಗ ಹೋಗಲಿ.

ಅಧ್ಯಕ್ಷರು :– ಸರ್ವ ಪಕ್ಷಗಳ, ಏಕ ಪಕ್ಷಗಳ ನಿಯೋಗ, ದ್ವಿ ಪಕ್ಷಗಳ ನಿಯೋಗ ಹೋಗುವುದು ಇವು-ಗಳೆಲ್ಲವೂ ಸರಕಾರದ ಜೊತೆಯಲ್ಲಿ ಪೂರ್ವ ಭಾವಿಯಾಗಿ ಸಮಾಲೋಚನೆಗಳನ್ನು ಮಾಡುವುದರ ಮೂಲಕ ತೀರ್ಮಾನವಾಗಬೇಕಾಗಿರತಕ್ಕಂತಹ ವಿಚಾರಗಳಲ್ಲವೇ ? ಪೂರ್ವ ಭಾವಿಯಾಗಿ ಖಾಸಗಿಯಾಗಿ ಸಮಾಲೋಚನೆ ಮಾಡಿ ಅನಂತರ ಸರ್ವ ಪಕ್ಷದ ನಿಯೋಗವೋ ಏನೋ ಒಂದು ಮಾಡೋಣ.

ಶ್ರೀ ವಾಟಾಳ್ ನಾಗರಾಜ್ :– ಆ ಪರಿಸ್ಥಿತಿ ನಿರ್ಮಾಣ ಮಾಡಿ.

ಅಧ್ಯಕ್ಷರು :– ಆ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತೇನೆ. ಒಂದು ಸಮಾಧಾನವೇನೆಂದರೆ ನಾನು ಕೊಡತಕ್ಕಂತಹ ಆಶ್ವಾಸನೆಗಳು ಸದನದ ಆಶ್ವಾಸನಾ ಸಮಿತಿ ಮುಂದೆ ಹೋಗುವುದಿಲ್ಲ. ಆದ್ದರಿಂದ ನಾನು ಧಾರಾಳವಾಗಿ ಆಶ್ವಾಸನೆಗಳನ್ನು ಕೊಡಬಹುದು.

ಶ್ರೀ ವಾಟಾಳ್ ನಾಗರಾಜ್ :– ಸಂಧಾನ ಮಾಡುವುದಕ್ಕೆ ತಮಗೆ ಅಧಿಕಾರವಿದೆ.

ಅಧ್ಯಕ್ಷರು :– ನಾನು ಇರತಕ್ಕಂಥಾದ್ದೇ ಸಂಧಾನ ಮಾಡುವುದಕ್ಕೆ.

ಶ್ರೀ ವಾಟಾಳ್ ನಾಗರಾಜ್ :– ತಮ್ಮ ಹೆಸರು ಸಂಧಾನಕ್ಕೆ ಅಪ್ಯಾಯಮಾನವಾಗಿರತಕ್ಕಂಥಾದ್ದು ಶ್ರೀಮಾನ್ ಕೃಷ್ಣ. ಕೃಷ್ಣ ಸಂಧಾನ ನಡೆಯಲಿ. ಎಲ್ಲರೂ ಲವಲವಿಕೆಯಿಂದ ಇರುತ್ತಾರೆ ನಗುಮುಖದಿಂದ ಇರುತ್ತಾರೆ.

ಅಧ್ಯಕ್ಷರು :– ಅದಕ್ಕೇ ನನ್ನನ್ನು ಇಲ್ಲಿ ಕೂಡಿಸಿರತಕ್ಕಂಥಾದ್ದು ನಾನು ಅದನ್ನು ಮಾಡುತ್ತೇನೆ. ಯಶಸ್ವಿಯಾಗಿ ಈ ಸಂಧಾನ ಮಾಡುತ್ತೇನೆ ನನಗೆ ಅವಕಾಶ ಕೊಡಿ.

ಶ್ರೀ ಸಿ. ಬೈರೇಗೌಡ :– ಮಾನ್ಯ ಯಡಿಯೂರಪ್ಪನವರು ಹಾಗೂ ಇತರ ಸ್ನೇಹಿತರು ಅವರ ಸ್ಥಾನಗಳಿಗೆ ಬರಬೇಕೆಂದು ನಾನು ಅವರಲ್ಲಿ ವಿನಂತಿಸುತ್ತೇನೆ. ಅವರ ಸ್ಥಾನಗಳಿಗೆ ಬಂದು ಕುಳಿತುಕೊಳ್ಳುವಂತೆ ಅವರಿಗೆ ತಾವೂ ಸೂಚನೆಯನ್ನು ಕೊಡುವುದು ಸೂಕ್ತವೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಅಧ್ಯಕ್ಷರು :– ಈಗ ಸಭೆ ಮುಂದುವರೆದು ಮತ್ತೆ 2–20 ಕ್ಕೆ ಸಮಾವೇಶಗೊಳ್ಳುವುದು.

(ಸಭೆ 1–17 ಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 2–20 ಕ್ಕೆ ಸೇರುವುದೆಂದು ನಿಶ್ಚಯಿಸಿತು.)

(ಸದನವು ಪುನಃ ಮಧ್ಯಾಹ್ನ 2–30 ಕ್ಕೆ ಸಮಾವೇಶಗೊಂಡಿತು.)

ಉಪಾಧ್ಯಕ್ಷೆಯವರು (ಶ್ರೀಮತಿ ನಾಗಮ್ಮ ಕೇಶವಮೂರ್ತಿ) ಪೀಠವನ್ನಲಂಕರಿಸಿದ್ದರು.

(ಪ್ರಾರಂಭದಲ್ಲಿ, ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ ಎಂಬ ಘೋಷಣೆ ಕೂಗುತ್ತಾ ಬಿ.ಜೆ.ಪಿ. ಯ ಮಾನ್ಯ ಸದಸ್ಯರು ಅಧ್ಯಕ್ಷ ಪೀಠದ ಎದುರಿನ ಆಂಗಣದಲ್ಲಿ ಧರಣಿ ಹೂಡಿದರು).

ಗಮನ ಸೆಳೆಯುವ ಸೂಚನೆಗಳು

ವಿಷಯ :– 1) ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಕುಬಟೂರು ಮಂಡಲ ಪಂಚಾಯಿತಿ ಸದಸ್ಯರೊಬ್ಬರ ಪತಿಯನ್ನು ಪೋಲೀಸರು ಹಿಂಸಿಸಿರುವುದು.

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) :– ಮಾನ್ಯ ಉಪಾಧ್ಯಕ್ಷಿಣಿಯವರೆ, ದಿನಾಂಕ 28–11–90 ರಂದು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಕುಬಟೂರು ಮಂಡಲ ಪಂಚಾಯಿತಿ ಸದಸ್ಯರೊಬ್ಬರ ಪತಿಯನ್ನು ಪೋಲೀಸರು ಹಿಂಸಿಸಿರುವ ಬಗ್ಗೆ ಗೃಹ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ

† ಶ್ರೀ ಧರ್ಮಸಿಂಗ್ (ಗೃಹ ಸಚಿವರು) :– ಮಾನ್ಯ ಉಪಾಧ್ಯಕ್ಷಿಣಿಯವರೆ, ತಮ್ಮ ಅಪ್ಪಣೆ ಪಡೆದು ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ದಿನಾಂಕ 27–11–1990 ರಂದು ಆನವಟ್ಟಿ ಪೋಲೀಸ್ ಠಾಣೆಗೆ ಮೂಗೂರು ಗ್ರಾಮದ ಶ್ರೀಮತಿ ಹನುಮಮ್ಮ ಎಂಬುವವರು ತನಗೆ ಹಾಗೂ ತನ್ನ ಮೊಮ್ಮಗ ರವಿ ಎಂಬುವವರಿಗೆ ರಾಮಪ್ಪ ಎಂಬುವವರು ಹೊಡೆದು ಹಲ್ಲೆ ಮಾಡಿರುವ ಬಗ್ಗೆ ಕೊಟ್ಟ ದೂರಿನ ಮೇರೆಗೆ ಆರೋಪಿಗಳಾದ ರಾಮಪ್ಪ, ಶಾಂತಪ್ಪ ಮತ್ತು ಹನುಮಂತಪ್ಪ ಎಂಬುವವರನ್ನು ಪೋಲೀಸ್ ಪೇದೆ ಶ್ರೀ ಡಾಕಪ್ಪರೊಂದಿಗೆ ಆನವಟ್ಟಿ ಪೋಲೀಸ್ ಠಾಣೆಗೆ ಕರೆಯಿಸಲಾಗಿತ್ತು. ಆರೋಪಿ ರಾಮಪ್ಪನು ಪಿರಾದಿದಾರಳಾದ ಹನುಮಮ್ಮನ ಮಗಳನ್ನು ಮದುವೆಯಾಗಿದ್ದು ಇವರಿಗೆ ಎರಡು ಮಕ್ಕಳಿದ್ದು ಅವರಲ್ಲಿ ರವಿಯು ಒಬ್ಬ. ಈ ಮೊದಲು ರಾಮಪ್ಪನು ಮಂಡಲ ಪಂಚಾಯಿತಿ ಸದಸ್ಯಳಾದ ಮಂಜಮ್ಮ ಎಂಬುವಳನ್ನು ಮದುವೆಯಾಗಿದ್ದ. ಆ ಸಂಬಂಧ ದಿನಾಂಕ 28–11–1990 ರಂದು ಪಿ. ಎಸ್. ಐ. ಆನವಟ್ಟಿ ಇವರಲ್ಲಿ ಅದೇ ಊರಿನ ಕೆಲವು ಜನರು ರಾಮಪ್ಪನನ್ನು ಬಿಡುವಂತೆ ಕೇಳಿಕೊಂಡಿರುತ್ತಾರೆ. ಪಿ. ಎಸ್. ಐ. ರವರು ಈ ವಿಷಯದಲ್ಲಿ ರಾಮಪ್ಪನನ್ನು ಬಿಡಲು ಒಪ್ಪದೇ ಇದ್ದಾಗ ಆರೋಪಿ ರಾಮಪ್ಪನು ತಾನು ತೊಟ್ಟ ಬಟ್ಟೆಗಳನ್ನು ಕಳಚಿ ಒಳಚಡ್ಡಿಯಮೇಲೆ ಪೋಲೀಸ್ ಠಾಣೆಯಿಂದ ಓಡಿ ಹೋಗಿದ್ದು, ಓಡಿ ಹೋಗುತ್ತಲೇ ದಾರಿಯಲ್ಲಿ ಸಿಕ್ಕ ಜನರಿಗೆ ಚೌಟಿ ಗೌಡರ ಪ್ರತಾಪದಲ್ಲಿ ಪೋಲೀಸ್‌ರು ನನಗೆ ಹೀಗೆ ಮಾಡಿದರು ಅಂತ ಹೇಳುತ್ತಾ, ಓಡಿರುತ್ತಾನೆ. ಓಡಿ ಹೋಗುವಾಗಲೇ ಅವನಿಗೆ ಕೆಲವು ಪರಚಿದ ಗಾಯಗಳಾಗಿರುತ್ತವೆ. ಈ ಬಗ್ಗೆ ರಾಮಪ್ಪ ಹಾಗೂ ಇನ್ನಿತರ ಇಬ್ಬರ ಮೇಲೆ ಶ್ರೀಮತಿ ಹನುಮಮ್ಮನ ದೂರಿನ ಮೇರೆಗೆ ಮೊಕದ್ದಮೆ ಸಂಖ್ಯೆ 141/90 ಭಾ. ದಂ. ಸಂ. 324, 326, 506 ಜೊತೆಗೆ 34 ರಲ್ಲಿ ಪ್ರಕರಣ ನೋಂದಾಯಿಸಿಕೊಂಡು ತನಿಖೆ ಮಾಡಲಾಗುತ್ತಿದೆ.

ರಾಮಪ್ಪನನ್ನು ಪ್ರಾಥಮಿಕ ಆರೋಗ್ಯ ಕೇಂದ್ರ, ಸೊರಬ ಇವರಲ್ಲಿ ಚಿಕಿತ್ಸೆ ಮಾಡಿಸಿದ್ದು ಅವರಿಂದ ಪಡೆದ ಹೊರರೋಗಿ ಚೀಟಿ ಮತ್ತು ಸರ್ಟಿಫಿಕೇಟ್ ಮೇರೆಗೆ ಪಿ. ಎಸ್. ಐ. ಇವರ ಮೇಲೆ ಆನವಟ್ಟಿ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 148/90 ಕಲಂ 342, 323 ಭಾ. ದಂ. ಸಂ. ಪ್ರಕಾರ ಪ್ರಕರಣ ನೋಂದಾಯಿಸಿಕೊಂಡು ಡಿ. ಎಸ್. ಪಿ. ಸಾಗರ ಇವರಿಂದ ತನಿಖೆ ನಡೆಸಲಾಗುತ್ತಿದೆ. ದಿನಪತ್ರಿಕೆಗಳಲ್ಲಿ ಬಂದಂತಹ ವರದಿಗಳು ಆಧಾರ ರಹಿತವಾಗಿದ್ದು, ಪೋಲೀಸರು ರಾಮಪ್ಪನಿಗೆ ಯಾವುದೇ ತರಹದ ಕಿರುಕುಳ ಅಥವಾ ಹಲ್ಲೆ ಮಾಡಿರುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) :– ಹೇಳಿಕೆಯ ಕೊನೆಯ ಭಾಗದಿಂದ ಪ್ರಾರಂಭ ಮಾಡೋಣ. 'ದಿನಪತ್ರಿಕೆಗಳಲ್ಲಿ ಬಂದಂತಹ ವರದಿಗಳು ಆಧಾರರಹಿತವಾಗಿದ್ದು, ಪೋಲೀಸರು ರಾಮಪ್ಪನಿಗೆ ಯಾವುದೇ ತರಹದ ಕಿರುಕಳ ಅಥವಾ ಹಲ್ಲೆ ಮಾಡಿರುವುದಿಲ್ಲ' ಎಂದು ಹೇಳಿದ್ದೀರಿ. ಪತ್ರಿಕೆಗಳವರು ವರದಿ ಕೊಡುವಾಗ ಸ್ಥಳಕ್ಕೆ ಹೋಗಿ ರಾಮಪ್ಪನ ಮನೆಗೆ ಹೋಗಿ ಅಲ್ಲಿರತಕ್ಕ ಪರಿಸ್ಥಿತಿಯನ್ನು ತಿಳಿದುಕೊಂಡು ವರದಿ ಕೊಟ್ಟಿದ್ದಾರೆ. ಪತ್ರಿಕಾ ವರದಿ ಆಧಾರರಹಿತ ಎಂಬುದು ನಿಮ್ಮ ಅಭಿಪ್ರಾಯವಾಗಿದ್ದರೆ ನಾನು ಹತ್ತನೇ ತಾರೀಖು ಈ ಕುಬಟೂರಿಗೆ ಹೋಗಿ ಅಲ್ಲಿ ರಾಮಪ್ಪನ ಮನೆಗೆ ಹೋಗಿ ಆತ ಇದ್ದ ಸ್ಥಿತಿಯನ್ನು